**ದಿನಾಂಕಃ 20.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ**

1. ನನ್ನ ಊರು ಹೊಳೆಇಟಗಿ ಆಗಿದ್ದು ಅದು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿ ಇರುತ್ತದೆ. ನಾನು ಹೂವಿನಹಡಗಲಿಯ ಹೊಳಗುಂದಿ ಗ್ರಾಮದಲ್ಲಿ ಮದುವೆಯಾಗಿದ್ದೇನೆ. ನನ್ನ ಹೆಂಡತಿಯ ಹೆಸರು ಸವಿತಾ. ನನ್ನ ಅತ್ತೆಯ ಹೆಸರು ಮಂಜುಳಾ. ನನ್ನ ಅತ್ತೆಯ ತಾಯಿ ಕಾಳಮ್ಮನೇ ಈ ದಾವೆಯ 1 ನೇ ಪ್ರತಿವಾದಿ ಎಂದರೆ ಸರಿ. 1 ನೇ ಪ್ರತಿವಾದಿಯ ಒಡಹುಟ್ಟಿದವರು ಎಷ್ಟು ಮಂದಿ? ಎಂದರೆ ನನಗೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯ ಮೊಮ್ಮಗಳನ್ನೇ ಮದುವೆಯಾಗಿದ್ದೇನೆ ಎಂದರೆ ಸರಿ. ನಾನು ಮದುವೆಯಾಗಿ 20 ವರ್ಷ ಕಳೆದಿದೆ. ನನ್ನ ಮದುವೆ ನಡೆದಾಗ 1 ನೇ ಪ್ರತಿವಾದಿಯ ಅಕ್ಕ-ತಂಗಿಯರು ಮತ್ತು ಅಣ್ಣ-ತಮ್ಮಂದಿರು ಎಲ್ಲರೂ ಭಾಗವಹಿಸಿದ್ದರು ಎಂದರೆ ಸರಿ. ಸಾಕ್ಷಿಯು ನಾನು ಕಾಳಮ್ಮನ ಮಕ್ಕಳು ಮದುವೆಗೆ ಬಂದಿದ್ದ ಬಗ್ಗೆ ಹೇಳಿದ್ದೇನೆ, ಕಾಳಮ್ಮನ ಒಡಹುಟ್ಟಿದವರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಕೆ.ಹೆಚ್.ಎಂ. ನಾಗಬಸಯ್ಯ ಮತ್ತು ಕೆ.ಹೆಚ್.ಎಂ. ವಾಗೀಶ ಇಬ್ಬರೂ 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. 2011 ನೇ ಇಸವಿಯಲ್ಲಿ 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳು ನೋಂದಣಿ ಪಾಲುವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿದೆ ಎಂದರೆ ಗೊತ್ತಿಲ್ಲ. ನಾನು ಸದರಿ ಪಾಲುವಿಭಾಗ ಆಗುವ ಮುಂಚೆಯೇ ಅವರ ಮನೆಯಲ್ಲಿ ಮದುವೆಯಾಗಿದ್ದರಿಂದ ನನಗೆ ಪಾಲುವಿಭಾಗದ ಬಗ್ಗೆ ಗೊತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗ ಪತ್ರದಲ್ಲಿ ಅವರು ದಾವಾ ಸ್ವತ್ತನ್ನು ಕೈ ಬಿಟ್ಟು ವಿಭಾಗ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 2011 ನೇ ಇಸವಿಯಿಂದ ಇವತ್ತಿನವರೆಗೆ ನಾನು 1 ನೇ ಪ್ರತಿವಾದಿಯನ್ನು ಬಲವಂತವಾಗಿ ದೌರ್ಜನ್ಯದಿಂದ ಕರೆದುಕೊಂಡು ಹೋಗಿ ನನ್ನ ಮನೆಯಲ್ಲಿ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 27.08.2016 ರಂದು ದಾವಾ ಸ್ವತ್ತಿನ ಬಗ್ಗೆ 1 ನೇ ಪ್ರತಿವಾದಿಯ ಮಗ ವಾಗೀಶ ನನ್ನ ವಿರುದ್ಧ ತಹಶೀಲ್ದಾರರಿಗೆ ದೂರು ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಸದರಿ ದೂರಿನಲ್ಲಿ ದಾವಾ ಸ್ವತ್ತನ್ನು ನಾನು ಪೋಡಿ ಮುಕ್ತ ಗ್ರಾಮ ಯೋಜನೆಯಡಿಯಲ್ಲಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುವುದಾಗಿ 1 ನೇ ಪ್ರತಿವಾದಿಯ ಮಗ ಕಂದಾಯ ಇಲಾಖೆ ಮತ್ತು ಮಹಿಳಾ ಆಯೋಗ ಇವರಿಗೆ ದೂರು ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ವಿಚಾರಣೆ ನಡೆದು ದಾವಾ ಸ್ವತ್ತನ್ನು ಪೋಡಿ ಮಾಡದೇ ಹಾಗೇ ಇರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

2. ದಾವಾ ಸ್ವತ್ತು ಎಷ್ಟು ಎಕರೆ ಇದೆ? ಎಂದರೆ 8 ಎಕರೆ ಇದೆ. 2017 ನೇ ಇಸವಿಯಲ್ಲಿ ದಾವಾ ಸ್ವತ್ತಿನ ಎಸ್.ಆರ್ ವ್ಯಾಲ್ಯೂ ಒಂದು ಎಕರೆಗೆ ರೂ. 2 ಲಕ್ಷ ಇತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಮೋಸ ಮಾಡಿ, ಸ್ವತ್ತಿನ ಅಂಡರ್ ವ್ಯಾಲ್ಯೂ ಮಾಡಿ ನೋಂದಣಿ ಅಧಿಕಾರಿಗಳ ಜೊತೆ ಶಾಮೀಲಾಗಿ ನನ್ನ ಹೆಸರಿಗೆ ಕ್ರಯ ಪತ್ರ ನೋಂದಣಿ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನಾನು ರೂ. 4 ಲಕ್ಷ ಕೊಟ್ಟಿದ್ದೇನೆ. ಅದನ್ನು ರೂ. 500/- ಮುಖಬೆಲೆಯ ಕರೆನ್ಸಿ ನೋಟುಗಳಲ್ಲಿ ಕೊಟ್ಟಿದ್ದೆ. 8 ಕಟ್ಟುಗಳನ್ನು ಕೊಟ್ಟಿದ್ದೆ. ದಿನಾಂಕ 08.11.2016 ರಿಂದ ಭಾರತ ಸರ್ಕಾರ ನೋಟು ಅಮಾನ್ಯೀಕರಣ ಜಾರಿಗೆ ತಂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶ ದಿನಾಂಕ 30.12.2016 ಕ್ಕೆ ಮುಕ್ತಾಯಗೊಂಡಿದೆ ಎಂದರೆ ನನಗೆ ಐಡಿಯಾ ಇಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡುವ ಮುಂಚೆ ನಾನು ಎಲ್ಲಿ ವಾಸ ಮಾಡುತ್ತಿದ್ದೆ? ಎಂದರೆ ಹೊಳೆಇಟಗಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದೆ. ನಾನು ನೋಟು ಅಮಾನ್ಯೀಕರಣ ಆದೇಶ ಕೊನೆಗೊಂಡ 6 ದಿನಗಳಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿದ್ದೇನೆ ಎಂದರೆ ನಾನು ಹೆಚ್ಚಾಗಿ ಶಾಲೆ ಕಲಿತಿಲ್ಲ, ಆದ್ದರಿಂದ ನನಗೆ ಅದೆಲ್ಲಾ ಗೊತ್ತಿಲ್ಲ

ಆದರೆ 06.01.2017 ರಂದು ಖರೀದಿ ಮಾಡಿದ್ದೇನೆ. ಆ ಸಮಯದಲ್ಲಿ ನಾನು 500 ರೂ. ಮುಖಬೆಲೆಯ 8 ಕಟ್ಟುಗಳು ಕೊಟ್ಟಿದ್ದೆ ಎಂದಿದ್ದು, ಆ ನೋಟುಗಳು ಯಾವ ನೋಟುಗಳು? ಎಂದರೆ ಅಮಾನ್ಯೀಕರಣ ಆದ ನಂತರ ಜಾರಿಗೆ ಬಂದ ಹೊಸ ಕರೆನ್ಸಿ ನೋಟುಗಳು. ನಾನು ಸದರಿ ಮೊತ್ತವನ್ನು ಬ್ಯಾಂಕಿಗೆ ಹಾಕಿರಲಿಲ್ಲ, ಭತ್ತ ಮಾರಿದ ಹಣವನ್ನು ಖರೀದಿ ಮಾಡಿದವರು ನನಗೆ ಕೊಟ್ಟಿದ್ದನ್ನು 1 ನೇ ಪ್ರತಿವಾದಿಗೆ ಕೊಟ್ಟಿದ್ದೇನೆ. ಭತ್ತವನ್ನು ಯಾವ ಅಂಗಡಿಗೆ ಕೊಟ್ಟಿದ್ದೇನೆ? ಎಂದರೆ ನಾನು ಪೇಟೆಗೆ ಒಯ್ಯುವುದಿಲ್ಲ, ಖರೀದಿದಾರರೇ ಸ್ಥಳಕ್ಕೆ ಬಂದು ಭತ್ತ ಖರೀದಿ ಮಾಡುತ್ತಾರೆ. ಖರೀದಿ ಮಾಡಿದವರ ಹೆಸರು ದಾವಣಗೆರೆಯ ಬಸವರಾಜ. ದಾವಾ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸೃಷ್ಟಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಣಗೆರೆಯ ಬಸವರಾಜನಿಗೆ 2017 ರಲ್ಲಿ ಭತ್ತ ಮಾರಿದ್ದೆ, ದಿನಾಂಕ 01.01.2017 ರಂದು ಭತ್ತ ಮಾರಿದ್ದೆ. ನನಗೆ ಒಟ್ಟು ಕುಟುಂಬದ 10 ಎಕರೆ ಜಮೀನು ಇರುತ್ತದೆ. ದಾವಣಗೆರೆಯ ಬಸವರಾಜನನ್ನು ನನ್ನ ಬಳಿ ಭತ್ತ ಖರೀದಿಸಿದ ಬಗ್ಗೆ ಸಾಕ್ಷಿ ಹೇಳಿಸಲು ಸಾಧ್ಯವೇ? ಎಂದರೆ ಅವರು ಎಲ್ಲಿದ್ದಾರೆಂದು ನನಗೆ ಗೊತ್ತಿಲ್ಲ. ನೋಟು ಅಮಾನ್ಯೀಕರಣ ಆಗಿದ್ದರಿಂದ ದಿನಾಂಕ 01.01.2017 ರಿಂದ 4 ತಿಂಗಳ ಕಾಲ ಈ ದೇಶದ ಅತ್ಯಂತ ಶ್ರೀಮಂತರಿಗೂ ರೂ. 1 ಲಕ್ಷ ಪಡೆಯುವುದು ಕಷ್ಟವಾಗಿತ್ತು ಎಂದರೆ ನನಗೆ ಬಸವರಾಜ ಹಣ ಕೊಟ್ಟಿದ್ದರು. ನಾನು ಭತ್ತ ಬೆಳೆದಿಲ್ಲ, ಬಸವರಾಜನಿಗೆ ಭತ್ತ ಮಾರಿಲ್ಲ, ಆತ ನನಗೆ ಹೊಸ ನೋಟುಗಳನ್ನು ಕೊಟ್ಟಿರಲಿಲ್ಲವಾದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ನನ್ನ ಮನೆಯಲ್ಲೇ ಇರಿಸಿಕೊಂಡು ಆಕೆಯ ಮೇಲೆ ಪ್ರಭಾವ ಬೀರಿ ಯಾವುದೇ ಹಣ ಸಂದಾಯ ಮಾಡದೇ ದಾವಾ ಸ್ವತ್ತಿನ ಕಡಿಮೆ ಮೌಲ್ಯಮಾಪನ ತೋರಿಸಿ ನನ್ನ ಹೆಸರಿಗೆ ಕ್ರಯ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿಯ 5 ಜನ ಮಕ್ಕಳು ಸಮ್ಮತಿ ಕೊಟ್ಟು ಸಹಿ ಮಾಡಿಲ್ಲ ಎಂದರೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಕೇಳಲಿಲ್ಲ. ಅದು 1 ನೇ ಪ್ರತಿವಾದಿಯ ಸ್ವಂತ ಆಸ್ತಿ ಇರುತ್ತದೆ. 2011 ರಲ್ಲಿ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಬೇಕೆಂದು 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳು ನಿರ್ಧಾರ ಮಾಡಿದ್ದರಿಂದಲೇ ಅವರ ಪಾಲುವಿಭಾಗ ಪತ್ರದಲ್ಲಿ ದಾವಾ ಸ್ವತ್ತನ್ನು ಕೈಬಿಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಕ್ಕಳು ವಾದಿಯ ಪರವಾಗಿ ಕ್ರಯ ಪತ್ರ ಮಾಡಿಕೊಡಲು ಸಿದ್ಧರಾದಾಗ ನಾನು 1 ನೇ ಪ್ರತಿವಾದಿಯನ್ನು ಬಲವಂತವಾಗಿ ನನ್ನ ಊರಿಗೆ ಕರೆದುಕೊಂಡು ಹೋಗಿ ಇಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ: 23.05.2025 ರಂದು ನಾನು 1 ನೇ ಪ್ರತಿವಾದಿಯನ್ನು ನಂದಿ ರೆಸಾರ್ಟ್ ಹೋಟೆಲ್ ಗೆ ಕರೆದುಕೊಂಡು ಬಂದಿದ್ದ ಬಗ್ಗೆ ಸಿಸಿ ಟಿವಿ ಫುಟೇಜ್ ಇರುತ್ತದೆ ಎಂದರೆ ಅವರೂ ಬಂದಿದ್ದರು, ನಾನೂ ಹೋಗಿದ್ದೆ. ನಮ್ಮೂರಿನಿಂದ ನಾನೇ ಆಕೆಯನ್ನು ಕಾರಿನಲ್ಲಿ ಕರೆ ತಂದಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ಇವತ್ತಿನವರೆಗೆ 1 ನೇ ಪ್ರತಿವಾದಿ ನನ್ನ ಸುಪರ್ದಿಯಲ್ಲಿದ್ದಾಳೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ಕೋರ್ಟಿಗೆ ಹಾಜರಾಗದಂತೆ ನಾನೇ ತಡೆದಿದ್ದೇನೆ ಎಂದರೆ ಸರಿಯಲ್ಲ. ಆಕೆ ಕೋರ್ಟಿನ ಮುಂದೆ ಬಂದಲ್ಲಿ ನಿಜಸಂಗತಿ ಗೊತ್ತಾಗುತ್ತದೆ ಎಂಬ ಭಯದಿಂದ ನಾನೇ ಆಕೆಯನ್ನು ಬರದಂತೆ ತಡೆದಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾನು ನೋಡಿದ್ದೇನೆ. ಪೂರ್ವಕ್ಕೆ ಗೊಲ್ಲರಹಳ್ಳಿ ತಿರುಕಪ್ಪ , ಪಶ್ಚಿಮಕ್ಕೆ ಕಮ್ಮತರ ರುದ್ರಪ್ಪ, ಉತ್ತರಕ್ಕೆ ಬಸವರಾಜಪ್ಪ ಮತ್ತು ದಕ್ಷಿಣಕ್ಕೆ ಕಲ್ಲಬಾಳ ಪರಸಪ್ಪ ಇರುತ್ತಾರೆ. ನಾನು ದಾವಾ ಸ್ವತ್ತನ್ನು ನೋಡಿಲ್ಲ ಮತ್ತು ಸುಳ್ಳು ಚೆಕ್ಕುಬಂದಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬೇಕಾದ ಚೆಕ್ಕುಬಂದಿ ನಮೂದಿಸಿಕೊಂಡು ಕ್ರಯ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿ ನೀಡಿದ ವಕೀಲರ ನೋಟೀಸ್ ನನಗೆ ಮತ್ತು 1 ನೇ ಪ್ರತಿವಾದಿಗೆ ಜಾರಿಯಾಗಿತ್ತು ಎಂದರೆ ನನಗೆ ಬಂದಿತ್ತು. ನಾನು ಆ ನೋಟೀಸಿಗೆ ನೀಡಿದ ಉತ್ತರ ನಿಪಿ8 ರಲ್ಲಿ ವಾದಿ ದಾವಾ ಸ್ವತ್ತಿಗೆ ನೀಡಿದ ಚೆಕ್ಕುಬಂದಿ ಸರಿ ಇಲ್ಲ ಎಂದು ಬರೆಸಿದ್ದುಂಟೇ? ಎಂದರೆ ಬರೆಯಿಸಿಲ್ಲ. ನಿಪಿ7 ಮತ್ತು ವಾದ ಪತ್ರದಲ್ಲಿ ವಾದಿ ತಿಳಿಸಿರುವ ಚೆಕ್ಕುಬಂದಿ ಸರಿ ಇದೆ ಎಂದು ಗೊತ್ತಿದ್ದರಿಂದಲೇ ನನ್ನ ರಿಪ್ಲೆ ನೋಟೀಸ್ ನಲ್ಲಿ ಅದನ್ನು ಅಲ್ಲಗಳೆದಿಲ್ಲ ಎಂದರೆ ಸರಿ. ವಾದಿಯ

ನೋಟೀಸ್ ಜಾರಿಯಾದ ನಂತರ ತರಾತುರಿಯಲ್ಲಿ ಅಮಾಯಕಳಾದ 1 ನೇ ಪ್ರತಿವಾದಿಗೆ ಮತ್ತು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಚೆಕ್ಕುಬಂದಿ ನಮೂದು ಮಾಡಿಕೊಂಡು ನನ್ನ ಕ್ರಯ ಪತ್ರ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಂಪೂರ್ಣ ಮಾಲೀಕತ್ವದ ಹಕ್ಕು 1 ನೇ ಪ್ರತಿವಾದಿಗೆ ಇತ್ತು ಎಂದರೆ ಸರಿ. ಆಕೆಯ ಮಕ್ಕಳಿಗೆ ವಾದಿಗೆ ಮಾಡಿಕೊಟ್ಟ ಕ್ರಯದ ಕರಾರು ಪತ್ರಕ್ಕೆ ಸಮ್ಮತಿ ಇತ್ತು ಎಂದರೆ ನಾನು ಅವರ ಜೊತೆ ಮಾತನಾಡಿಲ್ಲ. 1 ನೇ ಪ್ರತಿವಾದಿ ದಿನಾಂಕ 21.05.2016 ರಂದು ರೂ. 5 ಲಕ್ಷ ಮುಂಗಡ ಪಡೆದು ಸಾಕ್ಷಿಗಳ ಸಮಕ್ಷಮ ವಾದಿಗೆ ಕ್ರಯದ ಕರಾರು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ1 ರಲ್ಲಿ ಮತ್ತು ನನ್ನ ಕ್ರಯ ಪತ್ರ ನಿಡಿ1 ರಲ್ಲಿ ಇರುವ 1 ನೇ ಪ್ರತಿವಾದಿಯ ಸಹಿಗಳು ಆಕೆಯವೇ ಇರುತ್ತವೆ ಎಂದರೆ ಸರಿಯಲ್ಲ. ಎರಡೂ ದಾಖಲೆಗಳನ್ನು 1 ನೇ ಪ್ರತಿವಾದಿಯೇ ಬರೆದುಕೊಟ್ಟಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟೀಸಿನಲ್ಲಿ ವಾದಿ ಹೇಳಿದ ಪ್ರಕಾರ ಆಕೆ ರೂ. ಐದೂವರೆ ಲಕ್ಷಕ್ಕೆ ದಾವಾ ಸ್ವತ್ತನ್ನು ಖರೀದಿ ಮಾಡಲು ಒಪ್ಪಿದ್ದರು. ನೋಟೀಸ್ ನೀಡಿ ಒಂದು ವರ್ಷದ ನಂತರ ನಾನು ರೂ. 4 ಲಕ್ಷಕ್ಕೆ ಖರೀದಿ ಮಾಡಿದ್ದೇನೆ ಎಂದರೆ ಹೌದು ಎಂದು ಹೇಳಿ ನಂತರ ಖರೀದಿ ಮಾಡುವ ಮುಂಚೆ ವಾದಿ ನೀಡಿದ ನೋಟೀಸ್ ನನಗೆ ಬಂದಿಲ್ಲ ಎಂದು ಹೇಳಿದ್ದಾರೆ. ನಾನು 1 ನೇ ಪ್ರತಿವಾದಿಯ ಮೊಮ್ಮಗಳನ್ನು ಮದುವೆಯಾದ ನಂತರ ಇಲ್ಲಿಗೆ ಸಾಕಷ್ಟು ಬಾರಿ ಬಂದಿದ್ದೇನೆ. ಅವರ ಮನೆಯ ಅಕ್ಕ-ಪಕ್ಕದವರು ನನಗೆ ಪರಿಯವೆಂದರೆ ಸರಿ. ನನ್ನ ಕ್ರಯ ಪತ್ರಕ್ಕೆ ಸಾಕ್ಷಿ ಸಹಿ ಮಾಡಿದವರು ಎಲ್ಲರೂ ನನ್ನ ಸ್ವಂತ ಊರಿನವರು ಎಂದರೆ ಸರಿ. ಇಲ್ಲಿನ ವ್ಯಕ್ತಿಗಳಿಂದ ಸಾಕ್ಷಿ ಸಹಿ ಮಾಡಿಸಿದರೆ ಅವರಿಗೆ ನನ್ನ ಮೋಸದ ಬಗ್ಗೆ ಗೊತ್ತಾಗುತ್ತದೆಂದು ನನ್ನ ಸ್ವಂತ ಸ್ಥಳದಿಂದ ಸಾಕ್ಷಿಗಳನ್ನು ಕರೆಯಿಸಿ ಸಹಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಚೆನ್ನಾಗಿಯೇ ಇರುತ್ತೇವೆ. ಆಕೆಯ ಮಕ್ಕಳ ಜೊತೆ ನನ್ನ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ವಾದಿಗೆ ಕ್ರಯ ಪತ್ರ ಮಾಡಿಕೊಡಲು ಬರದೇ ಇದ್ದ ಕಾರಣದಿಂದಲೇ 1 ನೇ ಪ್ರತಿವಾದಿ, ಆಕೆಯ ಮಕ್ಕಳು ಮತ್ತು ನನ್ನ ನಡುವೆ ಮನಸ್ತಾಪ ಉಂಟಾಗಿದೆ ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರವನ್ನು ಮೋಸದಿಂದ ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕ್ರಯ ಪತ್ರವನ್ನು ಪಡೆಯಲು ವಾದಿಯೇ ಅರ್ಹಳು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಮೇಲೆ ಪಡೆದಿರುವ ಸಾಲಕ್ಕೆ ವಾದಿ ಬಾಧ್ಯಸ್ಥಳಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**